ಕರ್ನಾಟಕ ಸರ್ಕಾರ

ಜೂನ್ 25, 2017

## ರಂಜಾನ್ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಜೂನ್ 25:**

ಈದ್ ಉಲ್ ಫಿತರ್ ಎಂದೇ ಕರೆಯಲಾಗುವ ರಂಜಾನ್ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಮುಸಲ್ಮಾನ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

ಒಂದು ತಿಂಗಳ ಉಪವಾಸ ವ್ರತದ ಮೂಲಕ ಮನಃಶುದ್ಧಿ ಹಾಗೂ ದೇಹ ಶುದ್ಧಿಗೆ ಪೂರಕವಾಗುವ ರಂಜಾನ್‌ನ ಆಚರಣೆಗಳು ವಿಶಿಷ್ಠ ಮತ್ತು ವಿಭಿನ್ನ. ಉಪವಾಸ ವ್ರತದ ಅಂತ್ಯದಲ್ಲಿ ಆಚರಿಸುವ ರಂಜಾನ್ ಹಬ್ಬದಲ್ಲಿ ಉಳ್ಳವರು ಇಲ್ಲದವರಿಗೆ ಆಹಾರ-ವಸ್ತ್ರ ಕೊಡುಗೆಗಳನ್ನು ಕೊಟ್ಟು ಸಂಭ್ರಮಿಸುವುದು ಹಬ್ಬದ ವಿಶೇಷತೆಗಳಲ್ಲಿ ವಿಶೇಷತೆ. ದಾನದ ಈ ಸಂಪ್ರದಾಯವು ತಾನೂ ಬದುಕುವುದರ ಜೊತೆಗೆ ಮತ್ತೊಬ್ಬರನ್ನೂ ಬದುಕಲು ಬಿಡಬೇಕು ಎಂಬುದನ್ನು ಅಭಿವ್ಯಕ್ತಿಸುವ ಶ್ರೇಷ್ಠ ಸಂದೇಶವನ್ನು ಸಾರುತ್ತದೆ.

ಒಂದೆಡೆ ಜಾತಿ-ಜಾತಿಗಳ ನಡುವೆ ವಿಷಬೀಜ ಬಿತ್ತಿ ಕಂದರ ಸೃಷ್ಠಿಸುತ್ತಿರುವವರ ಸಂಖ್ಯೆ ಏರಿಕೆಯಾಗುತ್ತಿದೆ. ಮತ್ತೊಂದೆಡೆ ಧರ್ಮ-ಧರ್ಮಗಳ ನಡುವೆ ಸಂಘರ್ಷಕ್ಕೆ ಕಾರಣರಾಗುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಲಿದೆ. ಇಂತಹ ಸಂದರ್ಭದಲ್ಲಿ, ರಂಜಾನ್ ಹಬ್ಬವು ಎಲ್ಲೆಡೆ ಎಲ್ಲರಲ್ಲೂ ಸೋದರತೆ ಮತ್ತು ಸೌಹಾರ್ದತೆ ಮೂಡಿಸಲು ಪ್ರೇರಣೆ ಹಾಗೂ ಸ್ಫೂರ್ತಿಯನ್ನೀಯಲಿ ಎಂಬುದೇ ನನ್ನ ಮನದಾಳದ ಹಾರೈಕೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ